ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕ: 19.07.2024.

**ಪಾಟೀ ಸವಾಲು: ಪ್ರತಿವಾದಿಗಳ ಪರ ಶ್ರೀ ಯು.ಕೆ.ಐ. ವಕೀಲರಿಂದ:**

ನನ್ನ ತಂದೆ ಖುರ್ಷಿದ ಅಲಿ ರವರು ತಿರಿಕೊಂಡು 20 ವರ್ಷವಾಗಿದೆ ಎಂದರೆ ಸರಿ. ನನ್ನ ತಂದೆ ಖುರ್ಷಿದ ಅಲಿ ರವರು ತಮ್ಮ ಜೀವಂತ ಕಾಲಕ್ಕೆ 1 ಮತ್ತು 2 ನೇ ಪ್ರತಿವಾದಿಗಳಿಗೆ ಸರ್ವೆ ನಂ.80 ರಲ್ಲಿ ತಲಾ 4 ಎಕರೆ 23 ಗುಂಟೆ ಜಮೀನನ್ನು ಇಬ್ಬರಿಗೂ 1993 ರಲ್ಲಿ ಹಿಭಾ ಮಾಡಿಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 1993 ರಲ್ಲಿಯೇ ನಮ್ಮ ತಂದೆ ಪ್ರತಿವಾದಿಗಳಿಗೆ ದಾವಾ ಸ್ವತ್ತಿನ ಸ್ವಾಧಿನವನ್ನು ಕೊಟ್ಟಿರುತ್ತಾರೆ ಹಾಗೂ ಅವರೇ ಮಾಲಿಕ ಮತ್ತು ಕಬ್ಜಾದಾರರು ಇರುತ್ತಾರೆ ಎಂದರೆ ಸಾಕ್ಷಿ ಎಲ್ಲರೂ ಇರುತ್ತೇವೆ ಎಂದು ನುಡಿಯುತ್ತಾರೆ. ಅಬ್ದುಲ್ ರೌಫ್ ಎಂಬುವವರು 2 ನೇ ವಾದಿ ಗಂಡ ಇರುತ್ತಾರೆ. ಸದರಿ ಅಬ್ದುಲ್ ರೌಫ್ ಸುಮಾರು ವರ್ಷಗಳಿಂದ ಮುಂಬೈಯಲ್ಲಿ ಇರುತ್ತಾರೆ ಎಂದರೆ ಸರಿ.

ಅಬ್ದುಲ್ ರೌಫ್ ರವರ ಹೆಸರಿನಲ್ಲಿ 4 ಎಕರೆ ಜಮೀನು ಪಡಸಾವಳಗಿ ಗ್ರಾಮದಲ್ಲಿ ಇತ್ತು ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ಅಬ್ದುಲ್ ರೌಫ್ ರವರಿಗೆ ಅಡಮಾನ ಮಾಡಿದ್ದರು ಎಂದು ನುಡಿಯುತ್ತಾರೆ. ಆ ಬಗ್ಗೆ ದಾಖಲೆಗಳು ಹಾಜರುಪಡಿಸಿರುವುದಿಲ್ಲ. ಸದರಿ 4 ಎಕರೆ ಜಮೀನಿನ ಮಾಲಿಕರು ಅಬ್ದುಲ್ ರೌಫ್ ಇದ್ದರು ಎಂದರೆ ಸರಿ. ಸದರಿ ಅಬ್ದುಲ್ ರೌಫ್ ರವರು ಸಿವಿಲ್ ನ್ಯಾಯಾಲಯ ಆಳಂದದಲ್ಲಿ ಒಎಸ್.ನಂ.207/2009 ರಲ್ಲಿ ಮೇಲೆ ಹೇಳಿದ ಇಬ್ಬರು 1 ಮತ್ತು 2 ನೇ ಪ್ರತಿವಾದಿಯರಿಗೆ ತಲಾ ಎಕರೆ ಜಮೀನನ್ನು ಹಿಭಾ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ. ಸದರಿ ಹಿಭಾ ಮಾಡಿಕೊಟ್ಟ ನಾತೆಯಿಂದ 1 ಮತ್ತು 2 ನೇ ಪ್ರತಿವಾದಿಯರು ತಲಾ 2 ಎಕರೆ ಜಮೀನಿನ

ಮಾಲಿಕ ಮತ್ತು ಕಬ್ಜೆಯಲ್ಲಿ ಇರುತ್ತಾರೆ ಎಂದರೆ ಸರಿ. ಸರ್ವೆ ನಂ.81 ರಲ್ಲಿ 2 ಎಕರೆ 37 ಗುಂಟೆ ಜಮೀನನ್ನು ನನ್ನ ತಂದೆ ತಿರಿಕೊಂಡ ನಂತರ 1 ಮತ್ತು 2 ನೇ ಪ್ರತಿವಾದಿಯರು ನನ್ನ ತಂದೆಯನ್ನು ಪಾಲನೆ ಪೋಷಣೆ ಮಾಡಿದ ಸಲುವಾಗಿ, ಅವರಿಗೆ ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಪ್ರತಿವಾದಿಗಳ ಪರ ವಕೀಲರು ಮುಂದುವರೆದ ಪಾಟೀ ಸವಾಲು ಮಾಡಲು ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**